ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ESTD-1964

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

**ಊಟಿ ರಸ್ತೆ, ಮೈಸೂರು–೫೭೦ ೦೨೫**

☎: 0821-2548236 & 2548380 Fax: 0821-2548238 E-mail: jssautonomous@gmail.com www.[illegible]edu.in

## ಪ್ರಕಟನೆಯ ಕೃಪೆಗಾಗಿ

### 'ಕ್ಷೇತ್ರಕಾರ್ಯಗಳಿಂದ ಕನ್ನಡ ಸಾಹಿತ್ಯದಲ್ಲಿ ಹೊಸಹೊಸ ಶೋಧನೆಗಳು ಸಾಧ್ಯ' : ಡಾ. ಎಂ. ಚಿದಾನಂದಮೂರ್ತಿ

ದಿನಾಂಕ ೧೬ ಮಾರ್ಚ್ ೨೦೧೩ ಶನಿವಾರ ಬೆಳಿಗ್ಗೆ ೧೧ ಗಂಟೆಗೆ ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳೊಂದಿಗೆ ನಾಡಿನ ಖ್ಯಾತ ಸಂಶೋಧಕರಾದ ನಾಡೋಜ ಡಾ. ಎಂ. ಚಿದಾನಂದ ಮೂರ್ತಿ ಅವರು 'ಕನ್ನಡ ಸಾಹಿತ್ಯ ಮತ್ತು ಸಂಶೋಧನೆ'ಯನ್ನು ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಕ್ಷೇತ್ರಕಾರ್ಯಗಳಿಂದ ಕನ್ನಡ ಸಾಹಿತ್ಯದಲ್ಲಿ ಹೊಸಹೊಸ ಶೋಧನೆಗಳು ಸಾಧ್ಯ ಎಂದು ವಿದ್ಯಾರ್ಥಿಗಳೊಂದಿಗೆ ಸಂವಾದಿಸುತ್ತಾ ಅವರು ಪ್ರಾಚೀನ ಕಾಲದಲ್ಲಿ ಜನರು ಸಮಯ ನೋಡಲು ಬಳಸುತ್ತಿದ್ದ 'ಘಳಿಗೆ ಬಟ್ಟಲ'ನ್ನು ತಾವು ತಮ್ಮ ಕ್ಷೇತ್ರಕಾರ್ಯದಲ್ಲಿ ಹುಡುಕಿ ಇಂದಿನವರಿಗೆ ಛಾಯಚಿತ್ರದ ಮೂಲಕ ಪರಿಚಯ ಮಾಡಿಕೊಟ್ಟಿರುವುದಾಗಿ ತಿಳಿಸಿ ಅದನ್ನು ವಿದ್ಯಾರ್ಥಿಗಳಿಗೂ ತೋರಿಸಿದರು. ಅಲ್ಲದೆ ತಮ್ಮ ಕ್ಷೇತ್ರಕಾರ್ಯದಿಂದ ದೊರಕಿದ ಪ್ರಾಚೀನ ಕವಿಗಳಾದ ಪಂಪ, ಕುಮಾರವ್ಯಾಸರ ಇಂದಿನ ವಂಶಜರ ಭಾವಚಿತ್ರಗಳನ್ನು ತೋರಿಸುವುದರ ಮೂಲಕ ಅವರ ಹಿನ್ನೆಲೆಯನ್ನು ಮನದಟ್ಟು ಮಾಡಿಕೊಟ್ಟರು. ಇದರಿಂದ ಸಾವಿರ ವರ್ಷಗಳ ಹಿಂದಿನ ಕವಿಗಳ ವಂಶಜರನ್ನು ಗುರುತಿಸುವ ಸೌಭಾಗ್ಯ ಕನ್ನಡ ಸಾಹಿತ್ಯದ್ದಾಯಿತು. ಇದು ಅತ್ಯಂತ ವಿಶಿಷ್ಟವಾದುದು ಎಂದರು. ಅಲ್ಲದೆ ಹರಿಹರನ ವಾಸಸ್ಥಳವನ್ನು ಹಂಪಿಯ ವಿರೂಪಾಕ್ಷನ ಗುಡಿಯ ಎದುರಿನ ಭಾಗದಲ್ಲಿ ಪತ್ತೆ ಹಚ್ಚಿ ಗುರುತಿಸಿರುವುದು ತಮ್ಮ ಸಂಶೋಧನೆಯ ಹೆಗ್ಗಳಿಕೆ ಎಂದರು. ಚಾಮರಸ ಕವಿ ನೆಲಸಿದ್ದ ಗುಹೆಯನ್ನು ಹಂಪಿಯಲ್ಲಿ ಗುರುತಿಸಿರುವುದಾಗಿ ತಿಳಿಸಿ ಅದರ ಭಾವಚಿತ್ರವನ್ನು ತೋರಿಸಿ ಅದರ ವಿವರಣೆಯನ್ನು ನೀಡಿದರು.

ನೇಪಾಳದಲ್ಲಿಯೂ ಕನ್ನಡದ ಕಂಪು ಹರಡಿದ್ದರ ಬಗ್ಗೆ ಅಲ್ಲಿ ದೊರಕುವ ಶಾಸನಗಳನ್ನು ಉಲ್ಲೇಖಿಸಿ ವಿವರಿಸಿದರು. ಹಂಪಿಯ ಪಂಪಾಪುರದ ಅರಸ ವಿರೂಪಾಕ್ಷದೇವರ ಅಧೀನದಲ್ಲಿತ್ತು. ಹಾಗೆಯೇ ಕಾಶಿಯೂ ವಿಶ್ವನಾಥನ ಅಧೀನದಲ್ಲಿತ್ತು ಎಂಬುದಕ್ಕೆ ಕಾವ್ಯಗಳಿಂದ ಪುರಾವೆಗಳು ದೊರಕುತ್ತವೆ ಎಂಬ ವಿಚಾರವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತಾ ಸಂಸ್ಕೃತಿಯಲ್ಲಿ ಪ್ರತಿಸಂಸ್ಕೃತಿ ಎಂಬ ವಿಚಾರ ಸೂಕ್ತವಲ್ಲ ಎಂದು ತಿಳಿಸಿದರು. ವಚನ ಸಾಹಿತ್ಯದ ಇತ್ತೀಚಿನ ಸಂಶೋಧನೆಗೆ ಪ್ರತಿಕ್ರಿಯೆ ಬಯಸಿದ ಅಧ್ಯಾಪಕರಿಗೆ ವಚನ ಸಾಹಿತ್ಯದಲ್ಲಿಯೇ ಜಾತಿಯನ್ನು ವಿರೋಧಿಸಿದ ವಿಚಾರಗಳು ವಚನಗಳಲ್ಲಿಯೇ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿರುವುದನ್ನು ತಿಳಿಸಿದರು.

ಗೆ,

----------

----------

For ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.